



# ಹರಕೆಯ ಕೀಲಿ!

ಕುರಿ, ಕೋಣಗಳ ಬಲಿ ಕೊಟ್ಟು ಹರಕೆ ತೀರಿಸುವುದು ಎಲ್ಲರಿಗೂ ಗೊತ್ತು. ಕೆಲವರು ಗುಡಿ–ಗುಂಡಾರಗಳಲ್ಲಿ ಗಂಟೆ ಕಟ್ಟಿ ಹರಕೆ ತೀರಿಸುತ್ತಾರೆ. ಸೀರೆ–ಕುಪ್ಪಸ, ಬಂಗಾರ–ಬೆಳ್ಳಿಯಿಂದ ಹಿಡಿದು ಉಪ್ಪಿನ ಗಂಟಿನವರೆಗೆ ಹಲವು ಹರಕೆಗಳಿವೆ. 'ಉಪ್ಪಿನ ಹರಕೆಯಿಂದ ಉಪದ್ರವಗಳು ಕಡಿಮೆಯಾಗುತ್ತವೆ' ಎಂಬ ನಂಬಿಕೆ ಇದೆ. ಈ ಹರಕೆ ಸಂಪ್ರದಾಯ ಭಾರತಕ್ಕೆ ಮಾತ್ರ ಸೀಮಿತವಲ್ಲ; ಅದು ವಿಶ್ವವ್ಯಾಪಿ.

ಇಲ್ಲಿ ಚಿತ್ರದಲ್ಲಿರುವ ಕೀಲಿ ಹರಕೆಯ ಸಂಪ್ರದಾಯ ಇಟಲಿಯ ರೋಮ್ ಪಟ್ಟಣದಲ್ಲಿ ವ್ಯಾಪಕವಾಗಿ ಬೆಳೆಯುತ್ತಿದೆ. ಇದು ಪ್ರೇಮಿಗಳ, ನವದಂಪತಿಯ ಪ್ರೀತಿಯ ಹರಕೆ. ಯುವ ಪ್ರೇಮಿಗಳು ಕೀಲಿಯೊಂದನ್ನು ಖರೀದಿಸಿ ಅದರ ಮೇಲೆ ತಮ್ಮ ಹೆಸರು ಬರೆಯುತ್ತಾರೆ. ಜೊತೆಗೆ 'ನನಗೆ ನೀನು ಬೇಕು, ನಾನು ನಿನ್ನನ್ನು ಪ್ರೀತಿಸುತ್ತೇನೆ' ಮುಂತಾಗಿ ಪ್ರೀತಿಯ ಘೋಷಣೆಗಳನ್ನೂ ಬರೆಯುತ್ತಾರೆ. ಆ ಕೀಲಿಯನ್ನು ಅಲ್ಲಿನ ಸೇತುವೆಯ ಕಟಾಂಜನಕ್ಕೆ ಭದ್ರವಾಗಿ ಹಾಕಿ, ಕೀಲಿ ಕೈಯನ್ನು ಸೇತುವೆಯ ಕೆಳಗಿರುವ ನದಿಗೆ ಎಸೆದು ಬಿಡುತ್ತಾರೆ. 'ಪ್ರೇಮ ಬಂಧನ ಎಂದೂ ಬಿಚ್ಚದಿರಲಿ' ಎಂಬುದು ಈ ಹರಕೆಯ ಹಿಂದಿನ ಆಶಯ ಇರಬೇಕು. ಈ ಸೇತುವೆಯ ಹೆಸರು ಮಿಲ್ವಿಯೋ. ಅದು ರೋಮ್ ಮೂಲಕ ಹಾದು ಹೋಗುವ ಟೈಬರ್ ನದಿಯ ಮೇಲಿದೆ.



ಈ ಕೀಲಿ ಹರಕೆಯ ಜ್ವರ ಇಟಲಿಯಲ್ಲಿ ಎಷ್ಟು ವ್ಯಾಪಕವಾಗಿದೆ ಎಂದರೆ, ನಿತ್ಯವೂ ಪ್ರೇಮಿಗಳು ಇಲ್ಲಿಗೆ ಕೀಲಿ ಹಾಕಲು ಬರುತ್ತಾರೆ. ಸೇತುವೆಯ ತುಂಬ ಬರೀ ಕೀಲಿಗಳೇ ತುಂಬಿವೆ. ಸೇತುವೆಯೇ ಕಾಣದಷ್ಟು ಕೀಲಿಗಳು ಅಲ್ಲಿವೆ. ಅಷ್ಟೇ ಅಲ್ಲ, ಈ ಹರಕೆಯ ಕೀಲಿಗಳ ಭಾರಕ್ಕೆ ಸೇತುವೆಯೇ ಕುಸಿಯುವ ಅಪಾಯ ಇದೆಯಂತೆ!

■ ಸುಭಾಸ ಯಾದವಾಡ

